Note No. #1

ಸಲ್ಲಿಸಿದೆ,

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಿದ್ಯುತ್ ಗುತ್ತಿಗೆದಾರರ ಸಂಘ (ರಿ) ರವರು ದಿನಾಂಕ:14-10-2022 ರಂದು ಮಾನ್ಯ ಮುಖ್ಯ ಆಯುಕ್ತರು ಹಾಗೂ ಮಾನ್ಯ ವಿಶೇಷ ಆಯುಕ್ತರು (ಹಣಕಾಸು) ರವರಿಗೆ "ಲೆಕ್ಕ ಶೀರ್ಷಿಕೆ -P0300 ಅಡಿಯಲ್ಲಿ 2015-16 ನೇ ಸಾಲಿನಲ್ಲಿ ಜಾಬ್ ಸಂಖ್ಯೆ ನೀಡಿರುವ ಬೀದಿ ದೀಪಗಳ ದುರಸ್ತಿ ಹಾಗೂ ನಿರ್ವಹಣೆ ಕಾಮಗಾರಿಗಳಿಗೆ ಸಂಬಂಧಿಸಿದ ಬಿಲ್ಲುಗಳು ಪಾವತಿಯಾಗದೆ ಬಾಕಿ ಉಳಿದಿರುತ್ತದೆ. ಆದ್ದರಿಂದ ಬಾಕಿ ಇರುವ ಈ ಬಿಲ್ಲುಗಳನ್ನು ಪಾವತಿಸಬೇಕೆಂದು" ಕೋರಿ ಮನವಿ ಸಲ್ಲಿಸಿರುತ್ತಾರೆ. (ಮನವಿ ಪತ್ರ ಲಗತ್ತಿಸಿದೆ).

ಅದರಂತೆ ಪರಿಶೀಲಿಸಲಾಗಿ, 2015-16 ನೇ ಸಾಲಿನಲ್ಲಿ Job codes ಪಡೆದಿರುವ ಬಿಲ್ಲುಗಳ ಕುರಿತು **E-Office 8241** ರ Note 39 ರಲ್ಲಿ ವಿಶೇಷ ಆಯುಕ್ತರು (ಹಣಕಾಸು) ರವರು ಈ ಕೆಳಕಂಡಂತೆ ಆದೇಶಿಸಿರುತ್ತಾರೆ.

"Note # 39
There are 2015-16 job codes which are included for payment. Please remove them and submit for payment

13/02/2022 4:49 PM

THULASI MADDINENI
(SPECIAL COMMISSIONER (FINANCE)|BRUHAT BENGALURU MAHANAGARA PALIKE)"

ಮುಂದುವರೆದು, Escrow-SLM Category ಅಡಿಯಲ್ಲಿ ಪ್ರಸ್ತುತ 2015-16 ನೇ ಸಾಲಿಗೆ ಸಂಬಂಧಿಸಿದಂತೆ ಈ ಕೆಳಕಂಡ ಬಿಲ್ಲುಗಳು ಭಿತ್ತರಿಸುತ್ತಿರುತ್ತವೆ.

Sl.No.	jobnumber	CBR No.	CBR date	Gross	Contractor Name
1	015-16-000001	22-002332	20-Jul-2021	482016	RAJASHREE ELECTRICAL
2	122-16-000002	22-003602	21-Sep-2021	103177	MANJUNATHA.ENTERPRIS
3	133-16-000001	22-004035	12-Oct-2021	193008	MANJUNATHA.ENTERPRIS
4	122-16-000001	22-004036	12-Oct-2021	141138	MANJUNATHA.ENTERPRIS
5	158-16-000001	22-004037	12-Oct-2021	149469	MANJUNATHA.ENTERPRIS
6	163-16-000001	22-004038	12-Oct-2021	130982	SRI SAI ASSOCIATES
7	123-16-000001	22-004039	12-Oct-2021	114594	MANJUNATHA.ENTERPRIS
8	118-16-000003	22-004040	12-Oct-2021	133808	SRI MUTHATHI ELEC
9	147-16-000001	22-004041	12-Oct-2021	354041	SATYA ENTERPRISES /
10	132-16-000001	22-004042	12-Oct-2021	182733	SRI SWASTIK ELECTRIC
11	157-16-000002	22-004043	12-Oct-2021	91546	SRI SWASTIK ELECTRIC
12	155-16-000001	22-004044	12-Oct-2021	119218	SRI SAI ASSOCIATES
13	118-16-000002	22-004161	25-Oct-2021	404078	SRIHARIELECTRICALSPR
14	003-16-000005	22-004242	29-Oct-2021	219710	SRI LAKSHMI VARADARA
15	188-16-000001	23-002240	14-Sep-2022	1112998	SRI DURGA ENTERPRISE
16	195-16-000001	23-002241	14-Sep-2022	379855	SREE SRIKANTESWARA E
17	185-16-000001	23-002242	14-Sep-2022	254475	SRI DURGA ENTERPRISE

18	197-16-000001	23-002243	14-Sep-2022	1830267	SRIVENKATESWARAELECT
19	194-16-000001	23-002244	14-Sep-2022	801252	SREE SRIKANTESWARA E
20	193-16-000001	23-002245	14-Sep-2022	1505801	THRIPURAMBAELECTRICA
21	105-16-000002	23-002847	30-Sep-2022	218290	SAI ELECTRICOM
22	104-16-000001	23-002849	30-Sep-2022	174974	SAI ELECTRICOM
23	103-16-000001	23-002850	30-Sep-2022	303100	SAI ELECTRICOM
24	131-16-000001	23-002889	30-Sep-2022	223401	SAI ELECTRICOM
25	069-16-000002	22-004700	29-Nov-2021	224645	KUSUMAELECTRICALS
26	069-16-000001	22-004701	29-Nov-2021	226822	
27	069-16-000003	22-004702	29-Nov-2021	178383	
28	079-16-000002	23-002571	24-Sep-2022	562448	THIRUMALA ELECTRICAL
29	079-16-000002	23-000363	29-Apr-2022	549056	
			Total	**1,13,65,285.00**	

ಮೇಲ್ಕಂಡ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ಈ ಮೇಲ್ಕಂಡ ಬಿಲ್ಲುಗಳನ್ನು ಪಾವತಿಸುವ ಬಗ್ಗೆ ತಮ್ಮ ಮುಂದಿನ ಸೂಕ್ತ ಆದೇಶ ಕೋರಿ ಸಲ್ಲಿಸಿದೆ.

22/11/2022 3:16 PM

NANDINI D
(ACCOUNTS SUPRINTEDENT|BRUHAT BENGALURU MAHANAGARA PALIKE)

Note No. #2

pls discuss

22/11/2022 6:05 PM

RAJU S K
(CHIEF ACCOUNTS OFFICER|BRUHAT BENGALURU MAHANAGARA PALIKE)

Note No. #3

ಚರ್ಚಿಸಿದಂತೆ,
Note (1) ರಲ್ಲಿನ ಕೋಷ್ಟಕದಲ್ಲಿರುವ ಕಾಮಗಾರಿಗಳು 2015-16 ನೇ ಸಾಲಿಗೆ ಸಂಬಂಧಪಟ್ಟಿರುವುದರಿಂದ ಹಾಗೂ E-Office File No:8241 ರ Note (39)ರಲ್ಲಿ ಈಗಾಗಲೇ ಮಾನ್ಯ ವಿಶೇಷ ಆಯುಕ್ತರು (ಹಣಕಾಸು) ರವರು ಆದೇಶಿಸಿರುವಂತೆ ಸದರಿ ಕಾಮಗಾರಿಗಳು 2015-16 ನೇ ಸಾಲಿಗೆ ಸಂಬಂಧಪಟ್ಟಿದ್ದರೂ ಸಹಾ ಸದರಿ ಕಾಮಗಾರಿಗಳನ್ನು ಈವರೆವಿಗೂ ನವೀಕರಿಸಿ, ನಿರ್ವಹಣೆ ಮಾಡುತ್ತಿರುವುದಾಗಿ ತಿಳಿದುಬಂದಿದ್ದು, ಇವುಗಳನ್ನು ರದ್ದುಪಡಿಸಿ, ಹೊಸದಾಗಿ ಟೆಂಡರ್ ಕರೆಯುವ ಬಗ್ಗೆ ಸೂಕ್ತ ವರದಿ ಹಾಗೂ 2015-16 ನೇ ಸಾಲಿನ September-2022 ರ ವರೆಗೆ CBR ಆಗಿರುವ 29 ಕಾಮಗಾರಿಗಳ ಪಾವತಿ ಮಾಡುವ ಬಗ್ಗೆ ಸೂಕ್ತ ವರದಿಯನ್ನು ಅಧೀಕ್ಷಕ ಅಭಿಯಂತರರು (ವಿದ್ಯುತ್)ರವರಿಂದ ಪಡೆಯಬಹುದಾಗಿದ್ದು, ಈ ಬಗ್ಗೆ ತಮ್ಮ ಆದೇಶ ಕೋರಿ ಮಂಡಿಸಿದೆ.

24/11/2022 3:41 PM

NANDINI D
(ACCOUNTS SUPRINTEDENT|BRUHAT BENGALURU MAHANAGARA PALIKE)

Note No. #4

NOTE 3 ರಂತೆ ಪರಿಶೀಲಿಸಿ ಮಂಡಿಸಿ

24/11/2022 3:49 PM

RAJU S K
(CHIEF ACCOUNTS OFFICER|BRUHAT BENGALURU MAHANAGARA PALIKE)

Note No. #5

ನೋಟ್ 01 ರ ಕೋಷ್ಟಕದಲ್ಲಿರುವ ಕಾಮಗಾರಿಗಳು ಬೀದಿ ದೀಪಗಳ ವಾರ್ಷಿಕ ದುರಸ್ತಿ ಮತ್ತು ನಿರ್ವಹಣೆ ಕಾಮಗಾರಿಗಳಾಗಿದ್ದು, 2015-16 ನೇ ಸಾಲಿನ ಆಯವ್ಯಯದಲ್ಲಿ ಪಿ:0300 ಲೆಕ್ಕ ಶೀರ್ಷಿಕ ಅಡಿಯಲ್ಲಿ ಜಾಬ್ ಸಂಖ್ಯೆ ದೊರೆತಿರುತ್ತದೆ. ಸದರಿ ನಿರ್ವಹಣೆ ಕಾಮಗಾರಿಗಳಿಗೆ 2016-17 ನೇ ಸಾಲಿನಲ್ಲಿ ಟೆಂಡರ್ ಆಹ್ವಾನಿಸಿ ಅರ್ಹ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಲಾಗಿದ್ದು, 2018 ನೇ ಸಾಲಿನಲ್ಲಿ ಗ್ಲೋಬಲ್ ಟೆಂಡರ್ ಜಾರಿಯಲ್ಲಿದ್ದರಿಂದ **ತೆರಿಗೆ ಮತ್ತು, ಆರ್ಥಿಕ ಸ್ಥಾಯಿ ಸಮಿತಿಯ ವಿಷಯದ ಸಂಖ್ಯೆ: ತೆ ಆ ಸ್ಥಾ ಸಾ/179/2017-18 ದಿ:02/1/2018** ರ ನಿರ್ಣಯದಂತೆ ಈ ನಿರ್ವಹಣಾ ಕಾಮಗಾರಿಗಳಿಗೆ 2018-19 ನೇ ಸಾಲಿನ ಆಯವ್ಯಯದಲ್ಲಿ ಅವಶ್ಯವಿರುವ ಅನುದಾನವನ್ನು ನಿಗದಿಪಡಿಸಿಕೊಂಡು ಟೆಂಡರ್ ಆಹ್ವಾನಿಸಲು ಹಾಗೂ ಅಲ್ಲಿಯವರೆಗೆ ಆಯಾ ಪ್ಯಾಕೇಜ್ ನಿರ್ವಹಣೆಯನ್ನು ಚಾಲ್ತಿಯಲ್ಲಿದ್ದ ಪ್ಯಾಕೇಜ್ ಗುತ್ತಿಗೆದಾರರಿಂದಲೇ ಮುಂದುವರೆಸಲು ತೀರ್ಮಾನಿಸಿ ಅನುಮೋದನೆ ನೀಡಿದ್ದ ಮೇರೆಗೆ ಈ ಕಾಮಗಾರಿಗಳನ್ನು 2020-21 ನೇ ಸಾಲಿನವರೆಗೆ ಮುಂದುವರೆಸಲಾಗಿರುತ್ತದೆ.

ನಂತರ 2019-20 ನೇ ಸಾಲಿನಲ್ಲಿ ಜಾಬ್ ಸಂಖ್ಯೆ ಪಡೆದು ಹೊಸದಾಗಿ ಟೆಂಡರ್ ಆಹ್ವಾನಿಸಿ 2020-21 ನೇ ಸಾಲಿನಲ್ಲಿ ಹೊಸದಾಗಿ ಕಾರ್ಯಾದೇಶ ನೀಡಿ ನಿರ್ವಹಣೆ ಮಾಡಲಾಗಿದ್ದು, 2015-16 ನೇ ಸಾಲಿನಲ್ಲಿ ಜಾಬ್ ಸಂಖ್ಯೆ ದೊರೆತಿರುವ ನೋಟ್ 01 ರ ಕೋಷ್ಟಕದಲ್ಲಿರುವ ಕಾಮಗಾರಿಗಳು 2020-21 ನೇ ಸಾಲಿನಲ್ಲಿ ಪೂರ್ಣಗೊಂಡಿದ್ದು, ಸದರಿ ಬಿಲ್ಲುಗಳು ಅಂತಿಮ ಬಿಲ್ಲುಗಳಾಗಿದ್ದು, ಪಾವತಿಗಾಗಿ ಸಲ್ಲಿಸಲಾಗಿರುತ್ತದೆ.

ಮೇಲಿನ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ನೋಟ್ 01 ರ ಕೋಷ್ಟಕದಲ್ಲಿರುವ ಕಾಮಗಾರಿಗಳು ಬಿಲ್ಲುಗಳನ್ನು ನಿಯಮಾನುಸಾರ ಪಾವತಿಗಾಗಿ ಪರಿಗಣಿಸಲು ಸಲ್ಲಿಸಿದೆ.

29/11/2022 12:54 PM

UMADEVI M BALIGAR
(SUPERINTENDING ENGINEER (ELECTRICAL)|BRUHAT BENGALURU MAHANAGARA PALIKE)

Note No. #6

29/11/2022 1:40 PM

RAJU S K
(CHIEF ACCOUNTS OFFICER|BRUHAT BENGALURU MAHANAGARA PALIKE)

Note No. #7

Note (4)ರಲ್ಲಿನ ಸೂಚನೆಯಂತೆ Note (5) ರಲ್ಲಿ ಅಧೀಕ್ಷಕ ಅಭಿಯಂತರರು (ವಿದ್ಯುತ್) ರವರು "ಸದರಿ ನಿರ್ವಹಣೆ ಕಾಮಗಾರಿಗಳಿಗೆ 2016-17 ನೇ ಸಾಲಿನಲ್ಲಿ ಟೆಂಡರ್ ಆಹ್ವಾನಿಸಿ ಅರ್ಹ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಲಾಗಿದ್ದು, 2018 ನೇ ಸಾಲಿನಲ್ಲಿ ಗ್ಲೋಬಲ್ ಟೆಂಡರ್ ಜಾರಿಯಲ್ಲಿದ್ದರಿಂದ **ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ವಿಷಯದ ಸಂಖ್ಯೆ: ತೆ ಆ ಸ್ಥಾ ಸಾ/179/2017-18 ದಿ:02/1/2018** ರ ನಿರ್ಣಯದಂತೆ (ಪ್ರತಿ ಲಗತ್ತಿಸಿದೆ) ಈ ನಿರ್ವಹಣಾ ಕಾಮಗಾರಿಗಳಿಗೆ 2018-19 ನೇ ಸಾಲಿನ ಆಯವ್ಯಯದಲ್ಲಿ ಅವಶ್ಯವಿರುವ ಅನುದಾನವನ್ನು ನಿಗದಿಪಡಿಸಿಕೊಂಡು ಟೆಂಡರ್ ಆಹ್ವಾನಿಸಲು ಹಾಗೂ ಅಲ್ಲಿಯವರೆಗೆ ಆಯಾ ಪ್ಯಾಕೇಜ್ ನಿರ್ವಹಣೆಯನ್ನು ಚಾಲ್ತಿಯಲ್ಲಿದ್ದ ಪ್ಯಾಕೇಜ್ ಗುತ್ತಿಗೆದಾರರಿಂದಲೇ ಮುಂದುವರೆಸಲು ತೀರ್ಮಾನಿಸಿ ಅನುಮೋದನೆ ನೀಡಿದ್ದ ಮೇರೆಗೆ ಈ ಕಾಮಗಾರಿಗಳನ್ನು 2020-21 ನೇ ಸಾಲಿನವರೆಗೆ ಮುಂದುವರೆಸಲಾಗಿರುತ್ತದೆ. ನಂತರ 2019-20 ನೇ ಸಾಲಿನಲ್ಲಿ ಜಾಬ್ ಸಂಖ್ಯೆ ಪಡೆದು ಹೊಸದಾಗಿ ಟೆಂಡರ್ ಆಹ್ವಾನಿಸಿ 2020-21 ನೇ ಸಾಲಿನಲ್ಲಿ ಹೊಸದಾಗಿ ಕಾರ್ಯಾದೇಶ ನೀಡಿ ನಿರ್ವಹಣೆ ಮಾಡಲಾಗಿದ್ದು, 2015-16 ನೇ ಸಾಲಿನಲ್ಲಿ ಜಾಬ್ ಸಂಖ್ಯೆ ದೊರೆತಿರುವ ನೋಟ್ 01 ರ ಕೋಷ್ಟಕದಲ್ಲಿರುವ ಕಾಮಗಾರಿಗಳು 2020-21 ನೇ ಸಾಲಿನಲ್ಲಿ ಪೂರ್ಣಗೊಂಡಿದ್ದು, ಸದರಿ ಬಿಲ್ಲುಗಳು ಅಂತಿಮ ಬಿಲ್ಲುಗಳಾಗಿದ್ದು, ಪಾವತಿಗಾಗಿ ಸಲ್ಲಿಸಲಾಗಿರುತ್ತದೆ" ಎಂದು ವರದಿ ಸಲ್ಲಿಸಿರುತ್ತಾರೆ.

ಅಧೀಕ್ಷಕ ಅಭಿಯಂತರರು (ವಿದ್ಯುತ್) ರವರ ಶಿಫಾರಸ್ಸಿನ ವರದಿಯಂತೆ Escrow-SLM Category ಅಡಿಯಲ್ಲಿ ಪ್ರಸ್ತುತ 2015-16 ನೇ ಸಾಲಿಗೆ ಸಂಬಂಧಿಸಿದ 29 ಬಿಲ್ಲುಗಳ ಒಟ್ಟು ಮೊತ್ತ ರೂ.1,13,65,285/-ಗಳಾಗಿದ್ದು, ಈ ಕೆಳಕಂಡಂತೆ ಮೊತ್ತವನ್ನು ವಲಯವಾರು ಬಿಡುಗಡೆ ಮಾಡಬೇಕಾಗಿರುತ್ತದೆ. ವಿವರ ಈ ಕೆಳಕಂಡಂತಿದೆ.

Sl.No.	Zone	No.of bills	Amount
1	East	2	11,11,504-00
2	West	4	9,19,765-00
3	South	12	21,17,792-00
4	R.R.Nagar	3	6,29,850-00
5	Bommanahalli	6	58,84,648-00
6	Dasarahalli	1	4,82,016-00

7	Yelahanka	1	2,19,710-00
Total		**29**	**1,13,65,285-00**

ಮೇಲ್ಕಂಡ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ಮೇಲ್ಕಂಡ ಕೋಷ್ಟಕದಲ್ಲಿನ ಒಟ್ಟು ಮೊತ್ತ ರೂ.1,13,65,285/- ಗಳನ್ನು ಸಂಬಂಧಪಟ್ಟ ವಲಯಗಳಿಗೆ ಬಿಡುಗಡೆ ಮಾಡುವ ಸಂಬಂಧ ಹಾಗೂ ಈಗಾಗಲೇ ಸದರಿ 29 ಬಿಲ್ಲುಗಳನ್ನು IFMS ತಂತ್ರಾಂಶದಲ್ಲಿ Lock ಮಾಡಿಸಲಾಗಿದ್ದು, ಅವುಗಳನ್ನು ಪಾವತಿಸುವ ಸಲುವಾಗಿ Unlock ಮಾಡಿಸುವ ಬಗ್ಗೆ ತಮ್ಮ ಸೂಕ್ತ ಆದೇಶ ಕೋರಿ ಮಂಡಿಸಿದೆ.

29/11/2022 3:57 PM

NANDINI D
(ACCOUNTS SUPRINTEDENT|BRUHAT BENGALURU MAHANAGARA PALIKE)

Note No. #8

NOTE 7 submitted for directions,

30/11/2022 5:13 PM

RAJU S K
(CHIEF ACCOUNTS OFFICER|BRUHAT BENGALURU MAHANAGARA PALIKE)

Note No. #9

ಒಮ್ಮೆ ಚರ್ಚಿಸಿ.

01/12/2022 12:35 PM

JAYARAM RAIPURA
(SPECIAL COMMISSIONER (FINANCE)|BRUHAT BENGALURU MAHANAGARA PALIKE)

Note No. #10

As discussed ,NOTE 7 submitted for directions,

05/12/2022 3:18 PM

RAJU S K
(CHIEF ACCOUNTS OFFICER|BRUHAT BENGALURU MAHANAGARA PALIKE)

Note No. #11

Note 7 may be perused and corresponding amount may be ordered to be released.

06/12/2022 10:52 AM

JAYARAM RAIPURA
(SPECIAL COMMISSIONER (FINANCE)|BRUHAT BENGALURU MAHANAGARA PALIKE)

Note No. #12

ಅನುಮೋದಿಸಿದೆ.

06/12/2022 6:49 PM

TUSHAR GIRI NATH
(CHIEF COMMISSIONER|BRUHAT BENGALURU MAHANAGARA PALIKE)

Note No. #13

07/12/2022 11:35 AM

JAYARAM RAIPURA
(SPECIAL COMMISSIONER (FINANCE)|BRUHAT BENGALURU MAHANAGARA PALIKE)

Note No. #14

07/12/2022 4:09 PM

RAJU S K
(CHIEF ACCOUNTS OFFICER|BRUHAT BENGALURU MAHANAGARA PALIKE)